ಅಧ್ಯಕ್ಷರು: ಎಲ್ಲರೂ ಬಾವಿಯಿಂದ ಹೊರಗೆ ಹೋಗಲಿ, ಮಾತನಾಡಲಿಕ್ಕೆ ಅವಕಾಶ ಕೊಡುತ್ತೇನೆ.

3. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು:

ಕಾರ್ಯದರ್ಶಿ(2), ವಿಸ:(ಅ) ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2010 ಅನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು. (ಅನುಬಂಧ–I)

(ಗೊಂದಲ)

MR. SPEAKER: You cannot demand, I say, You cannot demand like that. ನೀವು ಹೇಳಿದಂತೆ ಸಭೆಯನ್ನು ನಡೆಸಲಿಕ್ಕೆ ನಾನು ಇಲ್ಲಿ ಕುಳಿತಿಲ್ಲ. you mind it ಯಾವುದನ್ನೂ ದಾಖಲೆಗೆ ತೆಗೆದುಕೊಳ್ಳಬೇಡಿ, ಏನು ಬೇಕಾದರೂ ಮಾತನಾಡಲಿ.

ಶ್ರೀ ಟಿ.ಬಿ.ಜಯಚಂದ್ರ: ಸದನ order ನಲ್ಲಿಲ್ಲ. ಅಧ್ಯಕ್ಷರೆ, ದಯಮಾಡಿ ಹಾಗೆ ಮಾಡಬೇಡಿ.

ಅಧ್ಯಕ್ಷರು: ಯಾವುದೂ ದಾಖಲೆಗೆ ತೆಗೆದುಕೊಳ್ಳಬೇಡಿ.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರ ಆದೇಶದ ವಿರೋಧ ಪಕ್ಷದವರ ಯಾವುದೇ ಚರ್ಚೆಯನ್ನು ದಾಖಲಿಸಿಲ್ಲ)

ಅಧ್ಯಕ್ಷರು: (ಆ) ಸದಸ್ಯರಿಗೆ ಈಗಾಗಲೆ ಪ್ರತ್ಯೇಕವಾಗಿ ಕಳುಹಿಸಲಾಗಿರುವ ಮೂರು ಮತ್ತು ನಾಲ್ಕನೇ ಪಟ್ಟಿಯ ರೀತ್ಯಾ ಕಾಗದ ಪತ್ರಗಳನ್ನು ಮಂಡಿಸುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

1978ರ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮದ ಪ್ರಕರಣ 8(ಎ)ರ ಮೇರೆಗೆ:

1. ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 224 ಬಿಗೆ ತಿದ್ದುಪಡಿ ಮಾಡಿ ದಿನಾಂಕ 7ನೇ ಜೂನ್ 2010ರಂದು ಹೊರಡಿಸಲಾದ ಎಫ್‌ಡಿ 1 ಎಸ್‌ಆರ್‌ಎ 2010ನೇ ಸಂಖ್ಯೆ ಅಧಿಸೂಚನೆ.

2. ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ II 'A' ನಿಯಮಗಳಿಗೆ ತಿದ್ದುಪಡಿ ಮಾಡಿ ದಿನಾಂಕ 8ನೇ ಜೂನ್ 2010ರಂದು ಹೊರಡಿಸಲಾದ ಎಫ್‌ಡಿ 4 ಎಸ್‌ಆರ್‌ಎ 2009ನೇ ಸಂಖ್ಯೆಯ ಅಧಿಸೂಚನೆ.

1979ರ ಕರ್ನಾಟಕ ಸರಕುಗಳ ಪ್ರವೇಶ ತೆರಿಗೆ ಕಾಯ್ದೆ 31ರ ಪ್ರಕರಣದ ಮೇರೆಗೆ:

1. ಅಧಿಸೂಚನೆ ಸಂಖ್ಯೆ ಎಫ್‌ಡಿ 40 ಸಿಎಸ್‌ಎಲ್ 2001(2), ದಿನಾಂಕ 1ಧಿಸೂಚನೆ ಸಂಖ್ಯೆ ಎಫ್‌ಡಿ 40 ಸಿಎಸ್‌ಎಲ್ 2001(2), ದಿನಾಂಕ 15.02.2001ಕ್ಕೆ ತಿದ್ದುಪಡಿ ಮಾಡಿ ದಿನಾಂಕ 10.05.2010ರಂದು ಹೊರಡಿಸಲಾದ ಎಫ್‌ಡಿ 18 ಸಿಇಟಿ 2009ನೇ ಸಂಖ್ಯೆಯ ಅಧಿಸೂಚನೆ.

2. ಕೈಗಾ ಅಣುವಿದ್ಯುತ್ ಯೋಜನೆಗಳು 28.08.2003ರಿಂದ 5 ವರ್ಷಗಳ ಅವಧಿಗಾಗಿ ಅಥವಾ ಯೋಜನೆ ಅನುಷ್ಠಾನ ಪೂರ್ಣಗೊಳ್ಳುವವರೆಗೆ ಇದರಲ್ಲಿ ಯಾವುದು ಮೊದಲು ಅಲ್ಲಿಯವರೆಗೆ ಸ್ಥಳೀಯ ಪ್ರದೇಶದೊಳಗೆ ಬರುವ ಅನುಸೂಚಿತ ಸರಕುಗಳ ಪ್ರವೇಶದ ಮೇಲೆ ಸಾರ್ವಜನಿಕ ಹಿತಾಸಕ್ತಿಯಿಂದ ತೆರಿಗೆ ವಿನಾಯಿತಿ ನೀಡಿ ದಿನಾಂಕ 02.07.2010ರಂದು ಹೊರಡಿಸಲಾದ ಎಫ್‌ಡಿ 06 ಸಿಇಟಿ 2010ನೇ ಸಂಖ್ಯೆಯ ಅಧಿಸೂಚನೆ.

ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನೆ ಮತ್ತು ನಗರಸಭೆಗಳ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮದ ಕಲಂ 49ರ ಮೇರೆಗೆ:

1. ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದ 2009–10ನೇ ಸಾಲಿನ ವಾರ್ಷಿಕ ವರದಿ.
2. ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ 2009–10ನೇ ಸಾಲಿನ ವಾರ್ಷಿಕ ವರದಿ.
3. ಕೆ.ಜಿ.ಎಫ್. ನಗರಾಭಿವೃದ್ಧಿ ಪ್ರಾಧಿಕಾರದ 2009–10ನೇ ಸಾಲಿನ ವಾರ್ಷಿಕ ವರದಿ.
4. ವಿಜಾಪುರ ನಗರಾಭಿವೃದ್ಧಿ ಪ್ರಾಧಿಕಾರದ 2009–10ನೇ ಸಾಲಿನ ವಾರ್ಷಿಕ ವರದಿ.
5. ಕಾರವಾರ ನಗರಾಭಿವೃದ್ಧಿ ಪ್ರಾಧಿಕಾರದ 2009–10ನೇ ಸಾಲಿನ ವಾರ್ಷಿಕ ವರದಿ.

6.ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ 2009–10ನೇ ಸಾಲಿನ ವಾರ್ಷಿಕ ವರದಿ.

7.ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ 2009–10ನೇ ಸಾಲಿನ ವಾರ್ಷಿಕ ವರದಿ.

8.ವಿಜಯನಗರದ ಪ್ರದೇಶಾಭಿವೃದ್ಧಿ ಪ್ರಾಧಿಕಾರದ (ತೋರಣಗಲ್ಲು) 2009–10ನೇ ಸಾಲಿನ ವಾರ್ಷಿಕ ವರದಿ.

9.ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ 2009–10ನೇ ಸಾಲಿನ ವಾರ್ಷಿಕ ವರದಿ.

10. ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರದ 2009–10ನೇ ಸಾಲಿನ ವಾರ್ಷಿಕ ವರದಿ.

11. ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ 2009–10ನೇ ಸಾಲಿನ ವಾರ್ಷಿಕ ವರದಿ.

12. ಗುಲ್ಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರದ 2009–10ನೇ ಸಾಲಿನ ವಾರ್ಷಿಕ ವರದಿ.

13. ರಾಮನಗರ–ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರದ 2009–10ನೇ ಸಾಲಿನ ವಾರ್ಷಿಕ ವರದಿ.

ಶ್ರೀ ವಿ.ಎಸ್.ಆಚಾರ್ಯ(ಗೃಹ ಮತ್ತು ಮುಜರಾಯಿ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

1952ರ ವಿಚಾರಣಾ ಆಯೋಗದ ಅಧಿನಿಯಮದ ಕಲಂ 3(4)ರ ಪ್ರಕರಣದ ಮೇರೆಗೆ:

1. ದಿನಾಂಕ: 04.07.2002ರಂದು ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಝಳಕಿ ಗ್ರಾಮದಲ್ಲಿ ನಡೆದ ಪೊಲೀಸ್ ಗೋಲಿಬಾರ್ ಬಗ್ಗೆ ನ್ಯಾಯಾಂಗ ತನಿಖೆ ನಡೆಸಲು ರಚಿಸಲಾದ ನ್ಯಾಯಮೂರ್ತಿ ಬಸವಂತರಾಯ ಪಾಟೀಲ್ ವಿಚಾರಣಾ ಆಯೋಗದ ವರದಿ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ ಕಲಂ 300(5)ನೇ ಪ್ರಕರಣದ ಮೇರೆಗೆ:

1. ಚಾಮರಾಜನಗರ ಜಿಲ್ಲಾ ಪಂಚಾಯತ್‌ನ 2007–08ನೇ ಸಾಲಿನ ವಾರ್ಷಿಕ ಆಡಳಿತ ವರದಿ.
2. ಉಡುಪಿ ಜಿಲ್ಲಾ ಪಂಚಾಯತ್‌ನ 2008–09ನೇ ಸಾಲಿನ ವಾರ್ಷಿಕ ಆಡಳಿತ ವರದಿ.
3. ಬೆಂಗಳೂರು ನಗರ ಜಿಲ್ಲಾ ಪಂಚಾಯತ್‌ನ 2008–09ನೇ ಸಾಲಿನ ವಾರ್ಷಿಕ ಆಡಳಿತ ವರದಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು (ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

1962ನೇ ಸಾಲಿನ ಕರ್ನಾಟಕ ಗೃಹ ಮಂಡಳಿ ಅಧಿನಿಯಂದ 55(3)ರ ಪ್ರಕರಣದ ಮೇರೆಗೆ:

1. ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇದರ 2008–09ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

ಶ್ರೀ ಬಸವರಾಜ್ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

1980ರ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಅಧಿನಿಯಮದ ಕಲಂ 24 ಮತ್ತು 25ರ ಪ್ರಕರಣದ ಮೇರೆಗೆ:

1. ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು ಬೆಳಗಾವಿ ಇದರ 2009–10ನೇ ಸಾಲಿನ ವಾರ್ಷಿಕ ಆಡಳಿತ ವರದಿ.
2. ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಶಿವಮೊಗ್ಗ ಇದರ 2009–10ನೇ ಸಾಲಿನ ವಾರ್ಷಿಕ ವರದಿ.

ಶ್ರೀ ವೆಂಕಟರಮಣಪ್ಪ (ಸಣ್ಣ ಕೈಗಾರಿಕೆ ಹಾಗೂ ರೇಷ್ಮೆ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

1956ರ ಖಾದಿ ಮಂಡಳಿಯ ಅಧಿನಿಯಮದ ಕಲಂ 9ರ ಪ್ರಕರಣದ ಮೇರೆಗೆ:

1. ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ 2008–09ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

ಅಧ್ಯಕ್ಷರು: ಮಂಡಿಸಲಾಯಿತು

(ಗೊಂದಲ)